ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ :   26-03-2021   ಪ್ರಶ್ನೆ ಸಂಖ್ಯೆ :   1959(2240)

ಸದಸ್ಯರ ಹೆಸರು ಮತ್ತು ಕ್ಷೇತ್ರ :   ಶ್ರೀ ಸುನೀಲ್ ಗೌಡ ಬಸನಗೌಡ ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ :   26-03-2021

ಉತ್ತರಿಸುವ ಸಚಿವರು:   ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ವಿಷಯ :   ಪಿ.ಡಿ.ಓ ಮತ್ತು ಸಹಾಯಕ ನಿರ್ದೇಶಕರ ಸೇವಾ ಜೇಷ್ಠತೆ ಮತ್ತು ಇತರ ಸೇವೆಗಳ ಕುರಿತು

(ಅ) 2010 ರಿಂದ 2021ರವರೆಗೆ ಪಿ.ಡಿ.ಓ ವೃಂದದಿಂದ ಸಹಾಯಕ ನಿರ್ದೇಶಕರ ಹುದ್ದೆಗೆ ಬಡ್ತಿ ಹೊಂದಿದವರಲ್ಲಿ, ಸರ್ಕಾರಿ ಸೇವೆಗೆ ಸೇರುವ ಪೂರ್ವದಲ್ಲಿ (ಗ್ರಾಮ ಪಂಚಾಯತಿ ಸಿಬ್ಬಂದಿ, ದಿನಗೂಲಿ ಹುದ್ದೆಯಲ್ಲಿದ್ದಾಗ) ಇಲಾಖಾ ಪರೀಕ್ಷೆ ಬರೆದು, ಇವುಗಳನ್ನು ಪರೀಕ್ಷಾರ್ಥ ಅವಧಿ ಘೋಷಣೆ ಹಾಗೂ ಬಡ್ತಿಗೆ ಪರಿಗಣಿಸಿದ ನೌಕರರೆಷ್ಟು; (ಹೆಸರು ಹಾಗೂ ಇವರ ಇಲಾಖಾ ಪರೀಕ್ಷೆ ಪ್ರಮಾಣ ಪತ್ರದ ಪ್ರತಿ ನೀಡುವುದು)

(ಆ) ಕರ್ನಾಟಕ ಸಿವಿಲ್ ಸೇವಾ (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು, 1974 ನಿಯಮ 4(2)(ಬಿ)ರಡಿಯ ಸೇವಾ ಪರೀಕ್ಷೆಗಳ ವಿನಾಯತಿ ಅವಧಿಯಲ್ಲಿ ಹಾಗೂ ಅವಧಿ ಮುಗಿದ ನಂತರ ಎಷ್ಟು ಪಿ.ಡಿ.ಓ ಗಳಿಗೆ ಸಹಾಯಕ ನಿರ್ದೇಶಕರ ಹುದ್ದೆಗೆ ನಿಯಮ 32ರಡಿ ಪ್ರಭಾರ ನೀಡಲಾಗಿದೆ ಮತ್ತು ಎಷ್ಟು ಪಿ.ಡಿ.ಓ ಗಳಿಗೆ ಸ್ಥಾನಪನ್ನ ಬಡ್ತಿ ನೀಡಲಾಗಿದೆ;(ಆದೇಶದ ಪ್ರತಿ ನೀಡುವುದು)

(ಇ) 1994 ರಿಂದ 2010ರವರೆಗೆ ಈ ಹಿಂದೆ ಅಸ್ತಿತ್ವದಲ್ಲಿದ್ದ ಪಂಚಾಯತ್ ವಿಸ್ತರಣಾಧಿಕಾರಿ ಹುದ್ದೆಯ ನೇಮಕಾತಿ ಪ್ರಾಧಿಕಾರದ ಹೆಸರು, ವೃಂದ ಮತ್ತು ನೇಮಕಾತಿ ನಿಯಮದ ಪ್ರತಿ, ವರ್ಷವಾರು ಜೇಷ್ಠತಾ ಪಟ್ಟಿಯ ಪ್ರತಿಗಳನ್ನು ಒದಗಿಸುವುದು;

(ಈ) ನಿರ್ವಹಣಾ ಜೇಷ್ಠತಾ ಪಟ್ಟಿ (Working Seniority List) ಅರ್ಥ ವಿವರಣೆ ನೀಡುವ ಕರ್ನಾಟಕ ನಾಗರೀಕ ಸೇವಾ ನಿಯಮದ ಪ್ರತಿ ಹಾಗೂ ನಿರ್ವಹಣಾ ಜೇಷ್ಠತಾ ಪಟ್ಟಿ ತಯಾರಿಸುವ ಕುರಿತು ಇರುವ ನಿಯಮಗಳೇನು; (ಪ್ರತಿ ಒದಗಿಸುವುದು)

(ಉ) ಪಂಚಾಯತ್ ವಿಸ್ತರಣಾಧಿಕಾರಿಗಳ ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ನಿರ್ವಹಣಾ ಜೇಷ್ಠತಾ ಪಟ್ಟಿಯ (Working Seniority List) ಪ್ರತಿ ಹಾಗೂ ಈ ಜೇಷ್ಠತಾ ಪಟ್ಟಿಯ ಆಧಾರದಲ್ಲಿ ಮುಂಬಡ್ತಿ ನೀಡುವ ಬಗ್ಗೆ ಇರುವ ಕಾಯ್ದೆ/ನಿಯಮದ ಪ್ರತಿ ನೀಡುವುದು ?